II. ಸವಾಲ ತಿರಸ್ಕಾರ ಮಾಡಿದ ಬಗ್ಗೆ ಕಾರಣ ತಿಳಿಯಪಡಿಸುವದಿಲ್ಲ.

III. ಹರಾಜಿನ ನಿಬಂಧನೆ ವಿಷಯದಲ್ಲಿಯೂ ಖಾಯಂಮಾಡುವ ವಿಷಯದಲ್ಲಿಯೂ ತಿರಸ್ಕರಿಸುವ ವಿಷಯದಲ್ಲಿಯೂ ಈ ಕೆಳಗೆ ರುಜು ಮಾಡಿ ಇರುವವರು ಪೂರಾ ಅಧಿಕಾರ ಪುಚ್ಚಿಸಿಕ್ಕೊಂಡು ಇರುತ್ತಾರೆ.

ಬಿ. ಗೋಪಾಲಯ್ಯಂಗಾರ್,
ಆಫೀಸರ ಇಂಚಾರ್ಜ್, ಸ್ಟೇಟ್ ಹುಜೂರ ಟ್ರೈಜರಿ.

ಬೆಂಗಳೂರ ಗೌರ್ನಮೆಂಟ್ ಸೆಂಟ್ರಲ್ ಬುಕ್ ಡಿಪೋ.

ನೋಟಿಸ್—ಇ ತಾರೀಖು 15ನೇ ಜೂ 1903.

ಇದೆರಡಿ ನಮೂದಿಸಿರುವ ಪುಸ್ತಕಗಳು ಬಿಕರಿಗೆ ಸಿದ್ಧವಾಗಿರುತ್ತವೆ :—

			ರೂ. ಆ. ಪೈ.
1.	ಕನ್ನಡ ಲೇಖನ ಪುಸ್ತಕ	6ನೇ ನಂಬರ್	0—1—0
2.	ಡಿಟೋ	7ನೇ ಡಿಟೋ	0—1—6
3.	ಕನ್ನಡ ಬಾಲಬೋಧೆ	IIನೇ ಭಾಗ	0—2—6

ಎಸ್. ಅಬ್ದುಲ್ ಖೈ, ಕ್ಯೂರೇಟರ್.

ನೋಟಿಸ್—ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ :—ಹುಣಸೂರು ತಾಲ್ಲೂಕು ಪೆರಿಯಾಪಟ್ಣದಲ್ಲಿದ್ದು ಈಗ್ಗೆ ಸುಮಾರು 7–8 ತಿಂಗಳಲ್ಲಿ ಕಾಲವಾದ ಶಿವಾಚಾರದ ಹೆಮ್ಮಕ್ಕಗಾಲದ ವೀರಣ್ಣನೆಂಬುವರಿಗೆ ನಾಲ್ಕು ಜನ ಹೆಣ್ಣು ಮಕ್ಕಳ ಪೈಕಿ ಎರಡನೇ ಮಗಳನ್ನ ನನಿಗೆ ಕೊಟ್ಟು ಲಗ್ನವಾಗಿದೆ. ಮೊದಲನೇ ಮೂರು ಹೆಣ್ಣು ಮಕ್ಕಳಿಗೂ ಗಂಡು ಮಕ್ಕಳು ಇರುತ್ತಾರೆ. ನಾಲ್ಕನೆ ಮಗಳಿಗೆ ಹೆಣ್ಣು ಮಗಳು ಇರುತ್ತಾಳೆ. ಸದರಿ ಹೆಮ್ಮಕ್ಕಗಾಲದ ವೀರಣ್ಣನವರು ಮೂರು ಸಾವಿರ ರೂಪಾಯಿನ–ಕರ ಆಸ್ತಿಯನ್ನೂ ಮತ್ತು ಎರಡುಸಾವಿರ ರೂಪಾಯಿನ–ಸ್ಥಿರ ಆಸ್ತಿಯನ್ನೂ ಬಿಟ್ಟು ಕಾಲವಾಗಿ ಇರುತ್ತಾರೆ, ಆತನಿಗೆ ಸಾಲವೇನೂ ಇರುವದಿಲ್ಲ. ಆತನ ಹೆಂಡತಿ ಭದ್ರಕಾಳಮ್ಮನವರು ಆಸ್ತಿ ಕಲಲ್ಯಾಡುವದಕ್ಕೆ ಉಪಕ್ರಮಿಸಿ ಇದ್ದಾರೆ. ಆಕೆಯಿಂದ ಯಾವ ಸ್ವತ್ತನ್ನೂ ಯಾರೇ ಆಗಲಿ ಕ್ರಯ, ಭೋಗ್ಯ, ಆಧಾರ, ದಾನಾದಿಗಳು ಮಾಡಿಕೊಳ್ಳಕೂಡದು. ಒಂದುವೇಳೆ ಮಾಡಿಕೊಂಡರ ಅಂಥಾವುಗಳು ರದ್ದಾಗಿ ನಷ್ಟಕ್ಕೆ ಗುರಿಯಾದಾರೆಂದು ಇದರಿಂದ ಯಚ್ಚರಿಸಿದೆ.

ಮೈಸೂರು ಶ್ರೀರಾಂಪೇಟೆಯಲ್ಲಿರುವ ಪಟ್ಟದಪುರದ ನಾಗಣ್ಣನ ರುಜುವು.

Mysore Government Central Press, Bangalore—1903